# ಪಾಠಾಧಾರಿತ(LBA) ಪ್ರಶ್ನೆ ಪತ್ರಿಕೆ 2026-27

## ಪಾಠ-1: ಪುಟ್ಟಜ್ಜಿ ಪುಟ್ಟಜ್ಜಿ ಕತೆ ಹೇಳು

**ತರಗತಿ: 7ನೇ ವಿಷಯ:ಕನ್ನಡ ಅಂಕಗಳು : 20 ಸಮಯ : 45 ನಿಮಿಷ**

---

**I. ಸರಿಯಾದ ಉತ್ತರ ಆರಿಸಿ ಬರೆಯಿರಿ. (4 x 1 = 4 ಅಂಕಗಳು)**

1. ಹುಡುಗಿಯು ಪೂಜೆಗೆ ಐದು ಹೂಗಳನ್ನು ತಂದಳು. (ಸಂಖ್ಯಾ ವಾಚಕ ಗುರುತಿಸಿ)

ಎ. ಪೂಜೆಗೆ ಬಿ. ಐದು ಸಿ. ಹೂ ಡಿ. ತಂದಳು

2. ಅವರು ಮನೆಯಿಂದ ಶಾಲೆಗೆ ಬಂದರು. (ಸರ್ವನಾಮ ಪದ ಗುರುತಿಸಿ)

ಎ. ಮನೆಯಿಂದ ಬಿ. ಅವರು ಸಿ. ಶಾಲೆಗೆ ಡಿ. ಬಂದರು

3. ಅಮ್ಮ ನೀಡಿದ ಹಣ್ಣು ತುಂಬಾ ಸಿಹಿಯಾಗಿತ್ತು. (ವಿಶೇಷಣ ಗುರುತಿಸಿ)

ಎ. ಅಮ್ಮ ಬಿ. ಹಣ್ಣು ಸಿ. ಸಿಹಿಯಾಗಿತ್ತು ಡಿ. ನೀಡಿದ

4. ವೈದ್ಯರು ರೋಗಿಗೆ ಮದ್ದು ನೀಡಿದರು. (ಕ್ರಿಯಾಪದ ಗುರುತಿಸಿ)

ಎ. ವೈದ್ಯರು ಬಿ. ಮದ್ದು ಸಿ. ರೋಗಿಗೆ ಡಿ. ನೀಡಿದರು

**II ಹೊಂದಿಸಿ ಬರೆಯಿರಿ. (4 x 1 = 4 ಅಂಕಗಳು)**

1. ರವಿ - ಅ. ರೂಢನಾಮ
2. ನದಿ - ಬ. ವಿಶೇಷಣ
3. ಜಾಣ - ಕ. ಅಂಕಿತನಾಮ
4. ದೊಡ್ಡ - ಡ. ಅನ್ವರ್ಥನಾಮ

**III. ಒಂದು ವಾಕ್ಯದಲ್ಲಿ ಉತ್ತರಿಸಿ. (4 x 1 = 4 ಅಂಕಗಳು)**

1. ಪುಟ್ಟಜ್ಜಿ ಹೇಳಿದ ತರಾವರಿ ಕಥೆಗಳನ್ನು ಹೆಸರಿಸಿ.
2. ಯುವಕ ಯಾರನ್ನು ಬಿಟ್ಟು ಕೊಡಲಾರೆ ಎಂದು ಹೇಳಿದನು?
3. ಜಿಂಕೆಯನ್ನು ಯುವಕ ಹೇಗೆ ಉಪಚರಿಸಿದನು?
4. ನಾ.ಡಿಸೋಜರವರ ಯಾವುದಾದರೂ ಎರಡು ಕೃತಿಗಳನ್ನು ಹೆಸರಿಸಿ.

**IV. ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ. (2 x 2 = 4 ಅಂಕಗಳು)**

1. ಯುವಕ ಕಾಡಿನಲ್ಲಿ ಹೇಗೆ ಮನೆ ನಿರ್ಮಿಸಿದನು?
2. ಸಾಕುಪ್ರಾಣಿ ಮತ್ತು ಕಾಡು ಪ್ರಾಣಿಗಳಿಗಿರುವ ವ್ಯತ್ಯಾಸಗಳನ್ನು ಬರೆಯಿರಿ.

**V. ನಾಲ್ಕೈದು ವಾಕ್ಯಗಳಲ್ಲಿ ಉತ್ತರಿಸಿ. (1 x 4 = 4 ಅಂಕಗಳು)**

1. ಯುವಕ ಮತ್ತು ಯುವತಿಯ ನಡುವೆ ಜಿಂಕೆಯ ಬಗೆಗೆ ನಡೆದ ಸಂಭಾಷಣೆಯನ್ನು ವಿವರಿಸಿ.

# ಪಾಠಾಧಾರಿತ(LBA) ಪ್ರಶ್ನೆ ಪತ್ರಿಕೆ 2026-27

## ಪಾಠ-2: ಸೀನಶೆಟ್ಟರು ನಮ್ಮ ಟೀಚರು

**ತರಗತಿ: 7ನೇ ವಿಷಯ:ಕನ್ನಡ ಅಂಕಗಳು : 20 ಸಮಯ : 45 ನಿಮಿಷ**

---

**I. ಸರಿಯಾದ ಉತ್ತರ ಆರಿಸಿ ಬರೆಯಿರಿ. (4 x 1 = 4 ಅಂಕಗಳು)**

1. 'ಇವರು ಇವತ್ತಿನಿಂದ ನಿಮ್ಮ ಟೀಚರು...' ಮಾತನ್ನು ಹೇಳಿದವರು ಯಾರು?

ಎ. ಮಾಂಡವಿ ಟೀಚರ್ ಬಿ. ತುಂಗಾ ಸಿ. ಸೀನ ಸೆಟ್ಟರು ಡಿ. ಯಶೋದ

2. 'ಹಂಗಾರೆ ಸೀನಸೆಟ್ಟರು ಇನ್ನು ನಮ್ಮ ಟೀಚರು' ಎಂಬಲ್ಲಿ ಬಂದಿರುವ ಸರ್ವನಾಮ ಪದ:

ಎ. ಸೀನ ಶೆಟ್ಟರು ಬಿ. ಇನ್ನೂ ಸಿ. ಟೀಚರು ಡಿ. ನಮ್ಮ

3. ಮೂರ್ ಎಕರೆ ಜಮೀನಿನಲ್ಲಿ ಸೀನಸೆಟ್ಟರು ಬೆಳೆಯುತ್ತಿದ್ದ ಬೆಳೆ ಯಾವುದು?

ಎ. ರಾಗಿ ಬಿ. ಸಾಸಿವೆ ಸಿ. ಕಡಲೆ ಡಿ. ಭತ್ತ

4. 'ನಾಟಿ ಮುಗಿದ ಮೇಲೆ ಇನ್ನು ಯಾವಾಗ ಹೊಡೆ ಹೊರಟಿತೋ?' ಇಲ್ಲಿ 'ಹೊಡೆ' ಪದದ ಅರ್ಥವೇನು?

ಎ. ಬೆತ್ತದ ಏಟು ಬಿ. ಕಾಳು ತುಂಬುವ ಮೊದಲು ಕಾಣುವ ಪೈರಿನ ತುದಿ

ಸಿ. ಪೈರಿನ ಸಸಿ ನೆಡುವುದು ಡಿ. ಒಣಗಿದ ಸಸಿಯ ತುದಿ

**II. ಬಿಟ್ಟ ಸ್ಥಳ ತುಂಬಿರಿ. (4 x 1 = 4 ಅಂಕಗಳು)**

1. 'ನಾ ಟೀಚರಲ್ಲ, ಎಂತಾ ಅಲ್ಲ, ನಾನೊಬ್ಬ ಪಡಪೋಶಿ ______.'
2. 'ನಿಮಗೆ ಬೇಸಾಯದಲ್ಲಿ ಸಹಾಯ ಮಾಡಲು ಇವರು ಒಪ್ಪಿಕೊಂಡಿರುವುದು ನಮ್ಮ ______.'
3. 'ಶಾಲಾ ಶಿಕ್ಷಣ ನಿಜ ಬದುಕಿನ ಜೊತೆಗೆ ಹಾಸು ಹೊಕ್ಕಿನ ಸಂಬಂಧ ಹೊಂದಿರಬೇಕೆಂಬುದೇ ______ ನಂಬಿಕೆಯಾಗಿತ್ತು.'
4. 'ಚಿಣ್ಣರ ಲೋಕದ ಬಹುಪಾಲು ಮಕ್ಕಳು ______ ಕುಟುಂಬದವರೇ.'

**III. ಒಂದು ವಾಕ್ಯದಲ್ಲಿ ಉತ್ತರಿಸಿ. (4 x 1 = 4 ಅಂಕಗಳು)**

1. ಸೀನ ಸೆಟ್ಟರು ಯಾರು?
2. ಚಿಣ್ಣರ ಲೋಕದ ಬಹುಪಾಲು ಮಕ್ಕಳು ಯಾವ ಕುಟುಂಬದಿಂದ ಬಂದವರಾಗಿರುತ್ತಾರೆ?
3. ಮಾಂಡವಿ ಟೀಚರ್ ಶಾಲಾ ಶಿಕ್ಷಣದಲ್ಲಿ ಏನನ್ನು ಅಳವಡಿಸಲು ಮುಂದಾದರು?
4. ಶಾಲಾ ಶಿಕ್ಷಣ ಯಾವುದರ ಜೊತೆಗೆ ಸಂಬಂಧ ಹೊಂದಿರಬೇಕು ಎಂಬುದು ಮಾಂಡವಿಯ ನಂಬಿಕೆಯಾಗಿತ್ತು?

**IV. ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ. (2 x 2 = 4 ಅಂಕಗಳು)**

1. 'ಸೀನ ಸೆಟ್ಟರು ನಮ್ಮ ಟೀಚರು' ಪಾಠದಲ್ಲಿ ನೀವು ಮೆಚ್ಚುವ ಪಾತ್ರ ಯಾವುದು ಮತ್ತು ಏಕೆ?
2. 'ರೈತ ಅನ್ನದಾತ ನಮಗೆಲ್ಲಾ ಉಪಕಾರಿ' ಎಂಬ ಮಾತನ್ನು ಸಮರ್ಥಿಸಿ.

**V. ನಾಲ್ಕೈದು ವಾಕ್ಯಗಳಲ್ಲಿ ಉತ್ತರಿಸಿ. (1 x 4 = 4 ಅಂಕಗಳು)**

1. ಹಳ್ಳಿ ಜೀವನವು ನಗರ ಜೀವನಕ್ಕಿಂತ ಉತ್ತಮವಾದದ್ದು ಹೇಗೆಂದು ಸಮರ್ಥಿಸಿ ಬರೆಯಿರಿ.

# ಪಾಠಾಧಾರಿತ(LBA) ಪ್ರಶ್ನೆ ಪತ್ರಿಕೆ 2026-27

## ಪಾಠ-3: ಹಿಲ್ಟನ್ ಹೆಡ್ ಚಳವಳಿ

**ತರಗತಿ: 7ನೇ ವಿಷಯ:ಕನ್ನಡ ಅಂಕಗಳು : 20 ಸಮಯ : 45 ನಿಮಿಷ**

---

**I. ಸರಿಯಾದ ಉತ್ತರ ಆರಿಸಿ ಬರೆಯಿರಿ. (4 x 1 = 4 ಅಂಕಗಳು)**

1. ಅಮೆರಿಕದಲ್ಲಿ ವಾಸವಾಗಿದ್ದ ಮೂಲ ನಿವಾಸಿಗಳನ್ನು ಏನೆನ್ನುತ್ತಾರೆ?
   ಎ. ರೆಡ್ ಇಂಡಿಯನ್ಸ್ ಬಿ. ಸ್ಥಳೀಯ ಅಮೆರಿಂಡಿಯನ್ಸ್ ಸಿ. ಯುರೋಪಿಯನ್ಸ್ ಡಿ. ಆಫ್ರಿಕನ್ಸ್
2. ಹಿಲ್ಟನ್ ಹೆಡ್ ನಲ್ಲಿರುವ ಸ್ಮಾರಕ ಮರ ಯಾವುದು?
   ಎ. ಆಲದ ಮರ ಬಿ. ಲಿಬರ್ಟಿ ಓಕ್ ಮರ ಸಿ. ಬೇವಿನ ಮರ ಡಿ. ಮಾವಿನ ಮರ
3. ಯಾವ ಆಟವನ್ನು ಶ್ರೀಮಂತರ ಆಟವೆಂದು ಕರೆಯಲಾಗುತ್ತದೆ?
   ಎ. ಗಾಲ್ಫ್ ಬಿ. ಟೆನ್ನಿಸ್ ಸಿ. ಕ್ರಿಕೆಟ್ ಡಿ. ಫುಟ್ಬಾಲ್
4. ಶಶಿಧರ ವಿಶ್ವಾಮಿತ್ರರ ಆತ್ಮಕಥೆ ಯಾವುದು?
   ಎ. ಸಂಚಿ ಬಿ. ಹಿಂದೂ ಧರ್ಮ ಸಿ. ಖಿಲ ಡಿ. ಸೃಷ್ಟಿಯ ರಂಗವಲ್ಲಿ

**II. ಬಿಟ್ಟ ಸ್ಥಳ ತುಂಬಿರಿ. (4 x 1 = 4 ಅಂಕಗಳು)**

1. ಹಿಲ್ಟನ್ ಹೆಡ್ ದ್ವೀಪವು ______ ಸಾಗರದಲ್ಲಿದೆ.
2. ಅಮೆರಿಕವನ್ನು ______ ನಾಡು ಎಂದು ಕರೆಯುತ್ತಿದ್ದರು.
3. ಓಕ್ ಮರದ ಸಾನ್ನಿಧ್ಯದಲ್ಲೇ ಎಷ್ಟೋ ______ ಗಳಾಗಿವೆಯಂತೆ.
4. ಯುರೋಪಿಯನ್ನರ ಆಗಮನವಾದ ಮೇಲೆ ಅಮೇರಿಂಡಿಯನ್ನರ ಸಮುದಾಯವು ______ ಆಯಿತು.

**III. ಒಂದು ವಾಕ್ಯದಲ್ಲಿ ಉತ್ತರಿಸಿ. (4 x 1 = 4 ಅಂಕಗಳು)**

1. 'ಹಿಲ್ಟನ್ ಹೆಡ್ ಚಳುವಳಿ' ಗದ್ಯಭಾಗವನ್ನು ಬರೆದವರು ಯಾರು?
2. ಲೇಖಕರು ಯಾವ ವರ್ಷ ಅಮೆರಿಕಾಗೆ ಹೋಗಿದ್ದರು?
3. ಕಡಲ ತಡಿಯ ಲೈಟ್ ಹೌಸನ್ನೇರಿದರೆ ಯಾವ ಚಿತ್ರಣವು ಕಾಣಸಿಗುತ್ತದೆ?
4. ಹಿಲ್ಟನ್ ಹೆಡ್ ನಲ್ಲಿ ಬಂದಿಳಿಯುವ ಶ್ರೀಮಂತರ ಉಡುಗೆ ತೊಡುಗೆ ಹೇಗಿತ್ತು?

**IV. ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ. (2 x 2 = 4 ಅಂಕಗಳು)**

1. ಹಿಲ್ಟನ್ ಹೆಡ್ ಮೊದಲು ಹೇಗಿತ್ತು?
2. ಯುರೋಪಿಯನ್ನರು ಬಂದ ಮೇಲೆ ಹಿಲ್ಟನ್ ಹೆಡ್ ನಲ್ಲಿ ಏನೇನು ಬದಲಾವಣೆಗಳಾದವು?

**V. ನಾಲ್ಕೈದು ವಾಕ್ಯಗಳಲ್ಲಿ ಉತ್ತರಿಸಿ. (1 x 4 = 4 ಅಂಕಗಳು)**

1. ಹಿಲ್ಟನ್ ಹೆಡ್ ನ ಸ್ಮಾರಕ ಮರದ ಬಗ್ಗೆ ವಿವರವಾಗಿ ಬರೆಯಿರಿ.

# ಪಾಠಾಧಾರಿತ(LBA) ಪ್ರಶ್ನೆ ಪತ್ರಿಕೆ 2026-27

## ಪಾಠ-4: ಮೈಲಾರ ಮಹದೇವ

**ತರಗತಿ: 7ನೇ ವಿಷಯ:ಕನ್ನಡ ಅಂಕಗಳು : 20 ಸಮಯ : 45 ನಿಮಿಷ**

---

**I. ಸರಿಯಾದ ಉತ್ತರ ಆರಿಸಿ ಬರೆಯಿರಿ. (4 x 1 = 4 ಅಂಕಗಳು)**

1. ಉಪ್ಪಿನ ಸತ್ಯಾಗ್ರಹ, ಅಸಹಕಾರ ಚಳುವಳಿ ಮುಂತಾದ ಹೋರಾಟಗಳ ನೇತೃತ್ವ ವಹಿಸಿದ್ದವರು ಯಾರು?
ಎ. ಜವಾಹರ್ ಲಾಲ್ ನೆಹರು ಬಿ. ಭಗತ್ ಸಿಂಗ್ ಸಿ. ಮಹಾತ್ಮ ಗಾಂಧೀಜಿ ಡಿ. ಸುಭಾಷ್ ಚಂದ್ರ ಬೋಸ್

2. 'ಅವರು ಮನೆಯನ್ನು ದೊಡ್ಡದಾಗಿ ಕಟ್ಟಿದ್ದಾರೆ.' ಇದರಲ್ಲಿ ವಿಶೇಷಣ ಪದ ಯಾವುದು?
ಎ. ಅವರು ಬಿ. ಮನೆಯನ್ನು ಸಿ . ದೊಡ್ಡದಾಗಿ ಡಿ . ಕಟ್ಟಿದ್ದಾರೆ

3. ಗುಂಪಿಗೆ ಸೇರದ ಪದವನ್ನು ಗುರುತಿಸಿ:
ಎ. ನೆಲ ಬಿ. ರಾತ್ರಿ ಸಿ. ಬ್ಯಾಂಕ್ ಡಿ. ಹಗಲು

4. ಬಟ್ಟೆ ನೇಯಲು ಉಪಯೋಗಿಸುವ ಯಂತ್ರ ಯಾವುದು?
ಎ. ಚರಕ ಬಿ. ಹೊಲಿಗೆ ಯಂತ್ರ ಸಿ. ಟ್ರಾಕ್ಟರ್ ಡಿ. ರೈಲು

**II. ಹೊಂದಿಸಿ ಬರೆಯಿರಿ. (4 x 1 = 4 ಅಂಕಗಳು)**

1. ದಂಡಿಯಾತ್ರೆ - ಅ. ಪ್ರಕೃತಿ ಚಿಕಿತ್ಸೆ
2. ಚರಕ - ಬ. ಸೆರೆಮನೆ
3. ಸೇವಾಶ್ರಮ - ಕ. ಉಪ್ಪಿನ ಸತ್ಯಾಗ್ರಹ
4. ಹಿಂಡಲಗಾ - ಡ. ನೂಲು

**III. ಒಂದು ವಾಕ್ಯದಲ್ಲಿ ಉತ್ತರಿಸಿ. (4 x 1 = 4 ಅಂಕಗಳು)**

1. ನಿಮಗೆ ತಿಳಿದಿರುವ ಮೂರು ಸ್ವಾತಂತ್ರ್ಯ ಹೋರಾಟಗಾರರ ಹೆಸರುಗಳನ್ನು ಬರೆಯಿರಿ.
2. ಅಹಿಂಸಾತ್ಮಕ ಹೋರಾಟದ ಉದ್ದೇಶವೇನು?
3. ಸೆರೆಮನೆಗೂ ಅರಮನೆಗೂ ಇರುವ ವ್ಯತ್ಯಾಸವೇನು?
4. ಯಾರ ಹುಟ್ಟುಹಬ್ಬವನ್ನು ಮಕ್ಕಳ ದಿನಾಚರಣೆಯಾಗಿ ಆಚರಿಸುತ್ತಾರೆ?

**IV. ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ. (2 x 2 = 4 ಅಂಕಗಳು)**

1. ನಾವು ಸ್ವದೇಶಿ ವಸ್ತುಗಳನ್ನೇ ಬಳಕೆ ಮಾಡಬೇಕು. ಏಕೆ?
2. ಬಾಲ್ಯದಿಂದಲೇ ಏಕೆ ದೇಶಪ್ರೇಮವನ್ನು ಬೆಳಸಿಕೊಳ್ಳಬೇಕು?

**V. ನಾಲ್ಕೈದು ವಾಕ್ಯಗಳಲ್ಲಿ ಉತ್ತರಿಸಿ. (1 x 4 = 4 ಅಂಕಗಳು)**

1. ಅಂದು ಜನರಿಗೆ ಖಾದಿ ಬಟ್ಟೆಯ ಮೇಲೆ ಅಪಾರ ಗೌರವವಿರಲು ಕಾರಣವೇನು?

# ಪಾಠಾಧಾರಿತ(LBA) ಪ್ರಶ್ನೆ ಪತ್ರಿಕೆ 2026-27

## ಪದ್ಯ-1: ಹುತ್ತರಿ ಹಾಡು

**ತರಗತಿ: 7ನೇ ವಿಷಯ:ಕನ್ನಡ ಅಂಕಗಳು : 20 ಸಮಯ : 45 ನಿಮಿಷ**

---

**I. ಸರಿಯಾದ ಉತ್ತರ ಆರಿಸಿ ಬರೆಯಿರಿ. (4 x 1 = 4 ಅಂಕಗಳು)**

1. ಕೊಡಗು ಯಾವ ಗಿರಿಯಿಂದ ಯಾವ ಗಿರಿಯವರೆಗೆ ಹಬ್ಬಿದೆ?

ಎ. ಬೊಮ್ಮಗಿರಿಯಿಂದ ಪುಷ್ಪಗಿರಿ, ಬಿ. ಮುಳ್ಳಯ್ಯನಗಿರಿಯಿಂದ ಪುಷ್ಪಗಿರಿ, ಸಿ. ಮಲೆಮಹದೇಶ್ವರ, ಡಿ. ನಂದಿಗಿರಿ

2. ಕೊಡಗರ ಪೂರ್ವಜರು ಯಾವ ಪ್ರಾಣಿಯ ಹಾಲನ್ನು ಕುಡಿದಿದ್ದಾರೆ?

ಎ. ಆಕಳು ಬಿ. ಕುರಿ ಸಿ. ಹುಲಿ ಡಿ. ಸಿಂಹ

3. ಕಾವೇರಿಯ ತವರು ಮನೆ ಯಾವುದು?

ಎ. ಮೈಸೂರು ಬಿ. ಕೊಡಗು ಸಿ. ಮಂಡ್ಯ ಡಿ. ಹಾಸನ

4. 'ಭೂರಮೆ' ಪದದ ಅರ್ಥವೇನು?

ಎ. ಆಕಾಶ ಬಿ. ಭೂದೇವಿ ಸಿ. ಮೋಡ ಡಿ. ಮಳೆ

**II. ಹೊಂದಿಸಿ ಬರೆಯಿರಿ. (4 x 1 = 4 ಅಂಕಗಳು)**

| | |
|---|---|
| 1. ಕಾವೇರಿ - | ಅ. ಕವಿಶಿಷ್ಯ |
| 2. ಪಂಜೆ ಮಂಗೇಶರಾವ್ - | ಬ. ತಪದ ಮನೆ |
| 3. ಅಗಸ್ತ್ಯ - | ಕ. ಸೊಂಟಕ್ಕೆ ಕಟ್ಟುವ ವಸ್ತ್ರ |
| 4. ದಟ್ಟಿ ಕುಪ್ಪಸ - | ಡ. ಭಾಗಮಂಡಲ |

**III. ಒಂದು ವಾಕ್ಯದಲ್ಲಿ ಉತ್ತರಿಸಿ. (4 x 1 = 4 ಅಂಕಗಳು)**

1. ಭೂರಮೆಯು ಹೇಗೆ ನಿಂತಿದ್ದಾಳೆ?
2. ಹುತ್ತರಿ ಹಬ್ಬವನ್ನು ಯಾವಾಗ ಆಚರಿಸುತ್ತಾರೆ?
3. ಕಾವೇರಿಯು ಹೇಗೆ ಹರಿಯುತ್ತಿದ್ದಾಳೆ?
4. ಕೊಡಗನ್ನಾಳಿದ ರಾಜರುಗಳನ್ನು ಹೆಸರಿಸಿ.

**IV. ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ. (2 x 2 = 4 ಅಂಕಗಳು)**

1. ಕವಿಯು ಕೊಡಗಿನ ಪ್ರಾಕೃತಿಕ ಸೌಂದರ್ಯವನ್ನು ಹೇಗೆ ವರ್ಣಿಸಿದ್ದಾರೆ?
2. ಕೊಡಗಿನವರ ವೇಷಭೂಷಣವನ್ನು ವರ್ಣಿಸಿರಿ.

**V 4-5 ವಾಕ್ಯಗಳಲ್ಲಿ ಉತ್ತರಿಸಿ. (1 x 4 = 4 ಅಂಕಗಳು)**

1. ಕೊಡಗರ ಶೌರ್ಯ ಸಾಹಸದ ಬಗ್ಗೆ ನಿಮ್ಮದೇ ಮಾತುಗಳಲ್ಲಿ ಬರೆಯಿರಿ.

# ಪಾಠಾಧಾರಿತ(LBA) ಪ್ರಶ್ನೆ ಪತ್ರಿಕೆ 2026-27

## ಪದ್ಯ-2: ಸ್ವಾತಂತ್ರ್ಯ ಸ್ವರ್ಗ

**ತರಗತಿ: 7ನೇ ವಿಷಯ:ಕನ್ನಡ ಅಂಕಗಳು : 20 ಸಮಯ : 45 ನಿಮಿಷ**

---

**I. ಸರಿಯಾದ ಉತ್ತರ ಆರಿಸಿ ಬರೆಯಿರಿ. (4 x 1 = 4 ಅಂಕಗಳು)**

1. ಕವಿಯ ಪ್ರಕಾರ ಸ್ವಾತಂತ್ರ್ಯ ಸ್ವರ್ಗದ ಪರಿಕಲ್ಪನೆ ಏನು?
   ಎ. ಸ್ವೇಚ್ಛೆಯ ಸ್ವರ್ಗವಲ್ಲ ಬಿ. ಹೆದರಿಕೆ ಇರುವುದಿಲ್ಲ
   ಸಿ. ಎಲ್ಲರೂ ಒಂದು ಎಂಬ ಭಾವನೆ ಡಿ. ಮೇಲಿನ ಎಲ್ಲವೂ
2. 'ಮಸ್ತಕ' ಪದದ ಅರ್ಥ:
   ಎ. ಪುಸ್ತಕ ಬಿ. ಮೆದುಳು ಸಿ. ಹೃದಯ ಡಿ. ಶರೀರ
3. ಸ್ವಾತಂತ್ರ್ಯ ಸ್ವರ್ಗ ಕವನವನ್ನು ಯಾವ ಕವನ ಸಂಕಲನದಿಂದ ಆರಿಸಲಾಗಿದೆ?
   ಎ. ತಮಸಾನದಿ ಬಿ. ನಿರೀಕ್ಷೆಯಲ್ಲಿ ಸಿ. ಅವ್ವ ಡಿ. ತಮಸಾನದಿ-ಎಡಬಲದಿ
4. 'ಮೈಸೂರಿನಿಂದ ನಮ್ಮ ಶಾಲೆಗೆ ಹುಡುಗಿ ಬಂದಿದ್ದಾಳೆ.' ಇದರ ಬಹುವಚನ ರೂಪ:
   ಎ. ಹುಡುಗಿಯರು ಬಂದಿದ್ದಾರೆ ಬಿ. ಹುಡುಗಿ ಬಂದಿದ್ದಾರೆ
   ಸಿ. ಹುಡುಗ ಬಂದಿದ್ದಾನೆ ಡಿ. ಹುಡುಗಿಯರು ಬಂದಿದ್ದಾಳೆ

**II. ಬಿಟ್ಟ ಸ್ಥಳ ತುಂಬಿರಿ. (4 x 1 = 4 ಅಂಕಗಳು)**

1. ಸಂಕುಚಿತ ಮನೋವೃತ್ತಿ ಅಳಿದರೆ ವಿಶ್ವವೆಂಬುದು ______ ಒಂದಾಗಿರುವುದು.
2. ಕವಿಯು ಸಂಪ್ರದಾಯದ ಅನಿಷ್ಟ ರೂಢಿ ನಿಯಮಗಳನ್ನು ______ ಎಂದು ಕರೆಯುತ್ತಾರೆ.
3. ಸುವಿಚಾರವೆಂಬ ಶುದ್ಧ ವಾಹಿನಿ ಹರಿದು ಎಲ್ಲರೂ ______ ಕವಿಯ ಆಶಯ.
4. 'ಅವ್ವ' ಎಂಬುದು ಡಾ. ಎಂ. ಅಕಬರ ಅಲಿಯವರ ______ ಸಂಕಲನ.

**III. ಒಂದು ವಾಕ್ಯದಲ್ಲಿ ಉತ್ತರಿಸಿ. (4 x 1 = 4 ಅಂಕಗಳು)**

1. ಸಂಕುಚಿತ ಮನೋವೃತ್ತಿ ಅಳಿದರೆ ಏನಾಗುವುದು?
2. ಡಾ ಎಂ ಅಕಬರ ಅಲಿಯವರ ಯಾವುದಾದರೂ ಒಂದು ಕೃತಿಯನ್ನು ಹೆಸರಿಸಿ.
3. ಕವಿಯು ಬಾಳು ಹೇಗೆ ಇರಬೇಕೆಂದು ಆಶಿಸಿದ್ದಾರೆ?
4. ಕವಿಯು ಸಂಪ್ರದಾಯದ ಅನಿಷ್ಟ ರೂಢಿಗಳನ್ನು ಏನೆಂದು ಕರೆದಿದ್ದಾರೆ?

**IV. ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ. (2 x 2 = 4 ಅಂಕಗಳು)**

1. 'ಸ್ವಾತಂತ್ರ್ಯ ಸ್ವರ್ಗ' ಪದ್ಯದಲ್ಲಿ ಕವಿಯ ಆಶಯವೇನು?
2. ಜ್ಞಾನದ ಬಗ್ಗೆ ಕವಿ ಏನೆಂದು ಹೇಳಿದ್ದಾರೆ?

**V. ಪದ್ಯ ಪೂರ್ಣಗೊಳಿಸಿ. (1 x 4 = 4 ಅಂಕಗಳು)**

ನಿರ್ಭೀತ ನಿರ್ಮುಕ್ತ ಮನವು ತಾನೆಲ್ಲಿಹುದು;

________________________________

______________________ಓ ತಂದೆ!

ಏಳಲೈ ಬಾಳಲೈ ನಾಡೆಮ್ಮದು!

## ಪಾಠಾಧಾರಿತ(LBA) ಪ್ರಶ್ನೆ ಪತ್ರಿಕೆ 2026-27

## ಪದ್ಯ-3: ಭಾಗ್ಯದ ಬಳೆಗಾರ

**ತರಗತಿ: 7ನೇ ವಿಷಯ:ಕನ್ನಡ ಅಂಕಗಳು : 20 ಸಮಯ : 45 ನಿಮಿಷ**

---

**I. ಸರಿಯಾದ ಉತ್ತರ ಆರಿಸಿ ಬರೆಯಿರಿ. (4 x 1 = 4 ಅಂಕಗಳು)**

1. ಅಚ್ಚ ಕೆಂಪಿನ ಬಳೆ________ ಗೀರಿನ ಬಳೆ.

ಎ. ನೀಲಿ ಬಿ. ಹಸಿರು ಸಿ. ಬಿಳಿ ಡಿ. ಕಪ್ಪು

2. ನಟ್ಟ ನಡುವೇಲಿ______ ಆಡುತ್ತಾಳೆ.

ಎ. ಚೆಸ್ ಬಿ. ಪಗಡೆಯ ಸಿ. ಕಬಡ್ಡಿ ಡಿ. ಚೌಕಾಬಾರ

3. ಯಾವ ಬಣ್ಣದ ಬಳೆಗಳು ಎಂದರೆ ಹಡೆದವ್ವನಿಗೆ ಇಷ್ಟ?

ಎ. ಕಪ್ಪು ಮತ್ತು ಬಿಳಿ ಬಿ. ಅಚ್ಚ ಕೆಂಪಿನ ಮತ್ತು ಹಸಿರು ಗೀರಿನ

ಸಿ. ನೀಲಿ ಮತ್ತು ಹಳದಿ ಡಿ. ಹಸಿರು ಮತ್ತು ನೀಲಿ

4. ನವಿಲು ಸಾರಂಗ ನಲಿತಾವೆ ______.

ಎ. ಊರು ಬಿ. ಬಳೆಗಾರ ಸಿ. ತವರೂರು ಡಿ. ಮನೆ

**II. ಹೊಂದಿಸಿ ಬರೆಯಿರಿ. (4 x 1 = 4 ಅಂಕಗಳು)**

1. ಕದ - ಅ. ಸೀಬೆ
2. ಚಪ್ಪರ - ಬ. ಬಾಳೆ
3. ಬಲಕ್ಕೆ - ಕ. ಕಂಚಿನದು
4. ಎಡಕ್ಕೆ - ಡ. ಮುತ್ತಿನದು

**III. ಒಂದು ವಾಕ್ಯದಲ್ಲಿ ಉತ್ತರಿಸಿ. (4 x 1 = 4 ಅಂಕಗಳು)**

1. ತವರು ಮನೆ ನೋಡಲು ಹೇಗಿದೆ?
2. ತವರು ಮನೆಗೆ ಹೋಗಲು ಗುರುತುಗಳೇನು?
3. ಮುತ್ತೈದೆ ಹೆಣ್ಣು ಯಾರನ್ನು ತನ್ನ ತವರಿಗೆ ಹೋಗಲು ಹೇಳುತ್ತಿದ್ದಾಳೆ?
4. ಹಡೆದವ್ವ ಯಾವ ಆಟವನ್ನು ಆಡುತ್ತಾಳೆ?

**IV. ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ. (2 x 2 = 4 ಅಂಕಗಳು)**

1. ಬಳೆಗಾರನ ರೀತಿ ಬೇರೆ ಯಾವ ಮಾರಾಟಗಾರರು ಮನೆ ಬಳಿ ಬರುತ್ತಾರೆ?
2. ಜನಪದರು ಪಗಡೆಯ ರೀತಿ ಬೇರೆ ಯಾವ ಆಟಗಳನ್ನು ಆಡುತ್ತಿದ್ದರು?

**V. ಪದ್ಯ ಪೂರ್ಣಗೊಳಿಸಿ. (1 x 4 = 4 ಅಂಕಗಳು)**

1. ಈ ಕೆಳಗಿನ ಪದ್ಯ ಭಾಗವನ್ನು ಪೂರ್ಣಗೊಳಿಸಿ:

ಆಲೆ ಆಡುತ್ತಾವೆ ........................

........................ ತೋರುಬಾರೆ ತವರೂರ.

# ಪಾಠಾಧಾರಿತ(LBA) ಪ್ರಶ್ನೆ ಪತ್ರಿಕೆ 2026-27

## ಪದ್ಯ-4: ವಚನಗಳ ಭಾವ ಸಂಗಮ

**ತರಗತಿ: 7ನೇ ವಿಷಯ:ಕನ್ನಡ ಅಂಕಗಳು : 20 ಸಮಯ : 45 ನಿಮಿಷ**

---

**I. ಸರಿಯಾದ ಉತ್ತರ ಆರಿಸಿ ಬರೆಯಿರಿ. (4 x 1 = 4 ಅಂಕಗಳು)**

1. ಈ ಕೆಳಗಿನವರಲ್ಲಿ ಕನ್ನಡದ ಮೊದಲ ಕವಿಯತ್ರಿ ಯಾರು?

ಎ. ಸಂಚಿ ಹೊನ್ನಮ್ಮ ಬಿ. ಅಕ್ಕಮಹಾದೇವಿ ಸಿ. ಕಂತಿ ಡಿ. ಮುಕ್ತಾಯಕ್ಕ

2. ಮಾತು ಬೆಳ್ಳಿ ಮೌನ _____.

ಎ. ತಾಮ್ರ ಬಿ. ಕಬ್ಬಿನ ಸಿ. ಬಂಗಾರ ಡಿ. ಹಿತ್ತಾಳೆ

3. ಶರಣರು ತಮ್ಮ ವಚನಗಳ ಕೊನೆಯಲ್ಲಿ ಬಳಸುವ ಹೆಸರನ್ನು ಏನೆಂದು ಕರೆಯುತ್ತಾರೆ?

ಎ. ಕಾವ್ಯನಾಮ ಬಿ. ಅಂಕಿತನಾಮ ಸಿ. ಬಿರುದು ಡಿ. ನಾಮಪದ

4. ಹನಿ ಹನಿ ಗೂಡಿದರೆ ಹಳ್ಳ, ತೆನೆ ತೆನೆ ಗೂಡಿದರೆ _____.

ಎ. ಬೆಟ್ಟ ಬಿ. ಬಳ್ಳ ಸಿ. ರಾಶಿ ಡಿ. ಹೊಲ

**II. ಹೊಂದಿಸಿ ಬರೆಯಿರಿ. (4 x 1 = 4 ಅಂಕಗಳು)**

1. ರಾಮನಾಥ - ಅ. ಬಸವಣ್ಣ
2. ಶಂಬುಜಕೇಶ್ವರ - ಬ. ಸತ್ಯಕ್ಕ
3. ಕಲಿ ದೇವರ ದೇವ - ಕ. ಮಡಿವಾಳ ಮಾಚಯ್ಯ
4. ಕೂಡಲಸಂಗಮದೇವ - ಡ. ಜೇಡರ ದಾಸಿಮಯ್ಯ

**III. ಒಂದು ವಾಕ್ಯದಲ್ಲಿ ಉತ್ತರಿಸಿ. (4 x 1 = 4 ಅಂಕಗಳು)**

1. ನಿಮಗೆ ತಿಳಿದಿರುವ ಮೂರು ವಚನಕಾರರ ಹೆಸರುಗಳನ್ನು ಬರೆಯಿರಿ.
2. ವಚನಕಾರರು ಅಂಕಿತನಾಮಗಳನ್ನು ಇಟ್ಟುಕೊಳ್ಳಲು ಕಾರಣವೇನು?
3. ಶಿವಶರಣರು ಎಂದು ಯಾರನ್ನು ಕರೆಯುತ್ತಾರೆ?
4. ಬಸವನಬಾಗೇವಾಡಿ ಯಾರ ಹುಟ್ಟೂರು?

**IV. ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ. (2 x 2 = 4 ಅಂಕಗಳು)**

1. 'ಸಜ್ಜನರ ಸಹವಾಸ ಹೆಜ್ಜೇನು ಸವಿದಂತೆ' - ಈ ವಾಕ್ಯವನ್ನು ವಿವರಿಸಿ.
2. ವಚನಗಳು ಜನಸಾಮಾನ್ಯರ ನಡತೆಯ ಮೇಲೆ ಹೇಗೆ ಪ್ರಭಾವ ಬೀರುತ್ತವೆ?

**V. ನಾಲ್ಕೈದು ವಾಕ್ಯಗಳಲ್ಲಿ ಉತ್ತರಿಸಿ.. (1 x 4 = 4 ಅಂಕಗಳು)**

1. ಬಸವಣ್ಣನವರ ಯಾವುದಾದರೂ ಒಂದು ವಚನದ ಬಗ್ಗೆ ವಿವರಣೆ ನೀಡಿ

# --- ಮಾದರಿ ಉತ್ತರ ಪತ್ರಿಕೆಗಳು ---

## ಪಾಠ-1: ಪುಟ್ಟಜ್ಜಿ ಪುಟ್ಟಜ್ಜಿ ಕತೆ ಹೇಳು

I. ಸರಿಯಾದ ಉತ್ತರ:

1-ಬಿ, 2-ಬಿ, 3-ಸಿ, 4-ಡಿ

II. ಬಿಟ್ಟ ಸ್ಥಳ / ಹೊಂದಿಸಿ:

1-ಕ, 2-ಅ, 3-ಡ, 4-ಬ

III. ಒಂದು ವಾಕ್ಯದಲ್ಲಿ:

1. ತಮಾಷೆ ಕತೆ, ಪುಟಾಣಿ ಕತೆ, ಸಣ್ಣ ಕತೆ, ದೊಡ್ಡ ಕತೆ, ಹಾಡ್ಯತೆ. 2. ಜಿಂಕೆಯನ್ನು. 3. ಸೊಪ್ಪು ಸದೆ, ಬೇರು, ತೊಗಟೆ ತಂದು ಮದ್ದು ಮಾಡಿ ಉಪಚರಿಸಿದನು. 4. ಕಾಡಿನ ಬೆಂಕಿ, ದ್ವೀಪ, ಬಳುವಳಿ.

IV. ಎರಡು-ಮೂರು ವಾಕ್ಯಗಳಲ್ಲಿ:

1. ಬೆಳೆದ ಕಾಡನ್ನು ಕತ್ತರಿಸಿ ಮನೆ ಕಟ್ಟಿದನು. ಮನೆಯ ಮುಂದೆ ತೋಟ ಮಾಡಿ ತನಗೆ ಏನು ಬೇಕು ಅದನ್ನು ಬೆಳೆದುಕೊಂಡು ಅಲ್ಲಿಯೇ ಉಳಿದನು.

2. ಸಾಕುಪ್ರಾಣಿಗಳು ವ್ಯವಹಾರ ಹಾಗೂ ಪ್ರೀತಿಯ ಉದ್ದೇಶದಿಂದ ಮನೆಗಳಲ್ಲಿ ಸಾಕುವಂತಹವು ಮತ್ತು ಸಾಧು ಸ್ವಭಾವದವು. ಕಾಡು ಪ್ರಾಣಿಗಳು ಕಾಡಿನಲ್ಲಿ ವಾಸಿಸುತ್ತಿರುತ್ತವೆ ಹಾಗೂ ಕ್ರೂರ ಭಾವನೆಯನ್ನು ಮೂಡಿಸುತ್ತವೆ.

V. 4 ಅಂಕದ ಪ್ರಶ್ನೆಗೆ ಉತ್ತರ:

ಯುವತಿಯು ಜಿಂಕೆಯನ್ನು ಕುರಿತು 'ಜಿಂಕೆಯನ್ನು ನಾನು ಸಾಕಿರುವುದು. ಅದು ತಪ್ಪಿಸಿಕೊಂಡು ಕಾಡಿಗೆ ಬಂದಿದೆ. ಅದನ್ನು ಹುಲಿ ಅಟ್ಟಿಸಿಕೊಂಡು ಬಂದಿದೆ, ಆದರೂ ಬದುಕಿದೆ ಎಂಬ ನಂಬಿಕೆ ಇಟ್ಟು ಹುಡುಕುತ್ತಿದ್ದೇನೆ' ಎಂದು ಹೇಳಿದಾಗ ಯುವಕನು 'ಜಿಂಕೆಯನ್ನು ನಾನು ಹುಲಿಯಿಂದ ರಕ್ಷಿಸಿದ್ದೇನೆ. ಅದು ನನಗೆ ಸೇರಿದ್ದು' ಎಂದು ಹೇಳಿದನು.

---

## ಪಾಠ-2: ಸೀನಶೆಟ್ಟರು ನಮ್ಮ ಟೀಚರು

I. ಸರಿಯಾದ ಉತ್ತರ:

1-ಎ, 2-ಡಿ, 3-ಬಿ, 4-ಬಿ

II. ಬಿಟ್ಟ ಸ್ಥಳ / ಹೊಂದಿಸಿ:

1. ರೈತ, 2. ಪುಣ್ಯ, 3. ಮಾಂಡವಿಯ, 4. ರೈತ

III. ಒಂದು ವಾಕ್ಯದಲ್ಲಿ:

1. ಬೇಸಾಯದ ಟೀಚರು / ಪಡಪೋಶಿ ರೈತ. 2. ರೈತ ಕುಟುಂಬದಿಂದ. 3. ಬೇಸಾಯವನ್ನು. 4. ನಿಜ ಬದುಕಿನ ಜೊತೆಗೆ.

IV. ಎರಡು-ಮೂರು ವಾಕ್ಯಗಳಲ್ಲಿ:
1ಮಕ್ಕಳ ಅಭಿವ್ಯಕ್ತಿ
2. ರೈತ ಕಷ್ಟಪಟ್ಟು ಬೇಸಾಯ ಮಾಡಿ ಬೆಳೆ ಬೆಳೆಯದಿದ್ದರೆ ನಮಗೆಲ್ಲ ಆಹಾರವಿಲ್ಲದೆ ಜೀವನ ನಿರ್ವಹಣೆ ಬಹಳ ಕಷ್ಟ ಆಗುತ್ತದೆ. ಮಳೆಯೊಡನಾಡುವ ಜೂಜಾಟವಾದರೂ ಸಹಿಸಿಕೊಂಡು ನಮಗೆಲ್ಲ ಅನ್ನ ನೀಡುವ ಅನ್ನದಾತನಾಗಿದ್ದಾನೆ.
V. 4 ಅಂಕದ ಪ್ರಶ್ನೆಗೆ ಉತ್ತರ:
ಹಳ್ಳಿಗಳಲ್ಲಿ ಶುದ್ಧವಾದ ಗಾಳಿ, ಪರಿಸರ, ವ್ಯವಸಾಯಕ್ಕೆ ಪೂರಕವಾದ ವಾತಾವರಣ ಇರುತ್ತದೆ. ಜನರಲ್ಲಿ ಪರಸ್ಪರ ಪ್ರೀತಿ, ವಿಶ್ವಾಸ, ಸಹಕಾರ ಇರುತ್ತದೆ. ನಗರದಂತೆ ವಾಹನ ದಟ್ಟಣೆ ಹಾಗೂ ಕಲುಷಿತ ವಾತಾವರಣ ಹಳ್ಳಿಗಳಲ್ಲಿ ಕಡಿಮೆ ಇರುತ್ತದೆ. ಹಾಗಾಗಿ ಹಳ್ಳಿ ಜೀವನವು ಉತ್ತಮವಾದದ್ದು.

---

## ಪಾಠ-3: ಹಿಲ್ಟನ್ ಹೆಡ್ ಚಳವಳಿ

I. ಸರಿಯಾದ ಉತ್ತರ:
1-ಬಿ, 2-ಬಿ, 3-ಎ, 4-ಎ
II. ಬಿಟ್ಟ ಸ್ಥಳ / ಹೊಂದಿಸಿ:
1. ಅಟ್ಲಾಂಟಿಕ್, 2. ಸಾಹುಕಾರರ, 3. ವಿವಾಹ, 4. ಧೂಳೀಪಟ
III. ಒಂದು ವಾಕ್ಯದಲ್ಲಿ:
1. ಶಶಿಧರ ವಿಶ್ವಾಮಿತ್ರ. 2. 1986. 3. ಅಟ್ಲಾಂಟಿಕ್ ಮಹಾಸಾಗರ, ನೌಕೆಗಳು, ಕಡಲಕಾಗೆಗಳು ಕಾಣಿಸುತ್ತದೆ. 4. ಬೂಟು, ಚೆಡ್ಡಿ, ಟೀಶರ್ಟ್, ಕೂಲಿಂಗ್ ಗ್ಲಾಸ್, ಸ್ಕಲ್ ಕ್ಯಾಪ್ ಧರಿಸುತ್ತಿದ್ದರು.
IV. ಎರಡು-ಮೂರು ವಾಕ್ಯಗಳಲ್ಲಿ:
1. ಹಿಲ್ಟನ್ ಹೆಡ್ ಮೊದಲು ಒಂದು ಸುಂದರ ದ್ವೀಪವಾಗಿತ್ತು. ಅಲ್ಲಿ ಪುರಾತನ ಸಸ್ಯ ಸಂಪತ್ತು, ಹಳೆ ಕಾಲದ ಹೊಂಡಗಳು, ಕಡಲ ತೀರದ ಸಸ್ಯಗಳು ಮತ್ತು ಕಾಡಿನ ಮರಗಳು ಇದ್ದವು.
2. ಯುರೋಪಿಯನ್ನರು ಬಂದ ಮೇಲೆ ಪ್ರಾಕೃತಿಕ ಸೌಂದರ್ಯ ಅಳಿಸಿ ಹೋಯಿತು. ಆ ಸ್ಥಳದಲ್ಲಿ ಸೀಬೀಚ್ ಹೋಟೆಲ್ ಗಳು, ಸ್ನೇಹೋಂಗಳು, ಗಾಲ್ಫ್ ಕೋರ್ಸುಗಳು ನಿರ್ಮಾಣವಾದವು.
V. 4 ಅಂಕದ ಪ್ರಶ್ನೆಗೆ ಉತ್ತರ:
ಹಿಲ್ಟನ್ ಹೆಡ್ ನ ಸ್ಮಾರಕ ಹಳೆಯ ಓಕ್ ಮರ. ಇದನ್ನು ಲಿಬರ್ಟಿ ಓಕ್ ಮರ ಎಂದು ಗುರುತಿಸಲಾಗುತ್ತದೆ. ಐವತ್ತರ ದಶಕದಲ್ಲಿ ಪರಿಸರ ರಕ್ಷಣೆಗಾಗಿ ಜನ ಈ ಮರದ ಕೆಳಗೆ ಒಗ್ಗೂಡಿ ಪಣತೊಟ್ಟಿದ್ದರು. 'ಇದು ಸಂರಕ್ಷಿತ ಜಾಗ, ದಯವಿಟ್ಟು ಕಟಕಟೆಯ ಒಳಗೆ ಪ್ರವೇಶಿಸಬೇಡಿ' ಎನ್ನುವ ಫಲಕವನ್ನು ನೆಟ್ಟಿದ್ದರು. ಹೀಗೆ ಆ ಮರ ನೂರು ಕಾಲ ಬಾಳುವಂತೆ ರಕ್ಷಿತವಾಗಿತ್ತು.

# ಪಾಠ-4: ಮೈಲಾರ ಮಹದೇವ

I. ಸರಿಯಾದ ಉತ್ತರ:

1-ಸಿ, 2-ಸಿ, 3-ಸಿ, 4-ಎ

II. ಬಿಟ್ಟ ಸ್ಥಳ / ಹೊಂದಿಸಿ:

1-ಕ, 2-ಡ, 3-ಅ, 4-ಬ

III. ಒಂದು ವಾಕ್ಯದಲ್ಲಿ:

1. ಮಹಾತ್ಮ ಗಾಂಧೀಜಿ, ಜವಾಹರ್ ಲಾಲ್ ನೆಹರು, ಸುಭಾಷ್ ಚಂದ್ರ ಬೋಸ್. 2. ಯಾವುದೇ ರೀತಿಯ ಹಿಂಸೆ, ಜಗಳ, ರಕ್ತಪಾತಗಳಿಲ್ಲದೆ ಚಳುವಳಿ ಮಾಡುವುದು. 3. ಸೆರೆಮನೆಯಲ್ಲಿ ಕೈದಿಗಳು ಬಂಧಿಯಾಗಿರುತ್ತಾರೆ. ಅರಮನೆಯಲ್ಲಿ ರಾಜ, ರಾಣಿ ಸ್ವತಂತ್ರವಾಗಿ ಐಶಾರಾಮಿ ಜೀವನ ನಡೆಸುತ್ತಾರೆ. 4. ಪಂಡಿತ್ ಜವಾಹರ್ ಲಾಲ್ ನೆಹರು.

IV. ಎರಡು-ಮೂರು ವಾಕ್ಯಗಳಲ್ಲಿ:

1. ದೇಶದಲ್ಲಿ ಉತ್ಪನ್ನವಾಗುವ ವಸ್ತುಗಳಿಗೆ ಮಾನ್ಯತೆ ನೀಡಿ, ಅವುಗಳನ್ನು ಬಳಕೆ ಮಾಡುವುದರಿಂದ ದೇಶದ ಅಭಿವೃದ್ಧಿ ಹಾಗೂ ಆರ್ಥಿಕ ಸಮಸ್ಯೆಗೆ ಪರಿಹಾರ ಸಿಕ್ಕಂತಾಗುತ್ತದೆ.

2. ಬಾಲ್ಯದಿಂದಲೇ ನಾವು ನಮ್ಮ ಊರು, ನಮ್ಮ ರಾಜ್ಯ, ನಮ್ಮ ದೇಶ ಎಂಬ ಭಾವನೆ ಬೆಳೆಸಿಕೊಂಡಷ್ಟು ದೇಶದ ಮೇಲಿನ ಒಲವು ಹಾಗೂ ಪ್ರೀತಿ ಹೆಚ್ಚುತ್ತದೆ.

V. 4 ಅಂಕದ ಪ್ರಶ್ನೆಗೆ ಉತ್ತರ:

ಸ್ವಾತಂತ್ರ್ಯ ಚಳುವಳಿಯ ಸಮಯದಲ್ಲಿ ಸ್ವದೇಶಿ ವಸ್ತುಗಳ ಬಳಕೆಗೆ ಒತ್ತು ನೀಡಲಾಯಿತು. ಬ್ರಿಟಿಷರ ಬಟ್ಟೆಗಳನ್ನು ಬಹಿಷ್ಕರಿಸಿ, ನಮ್ಮದೇ ದೇಶದಲ್ಲಿ ತಯಾರಾದ ಖಾದಿ ಬಟ್ಟೆಗಳನ್ನು ಧರಿಸಲು ಗಾಂಧೀಜಿ ಕರೆ ನೀಡಿದರು. ಇದರಿಂದ ಜನರಿಗೆ ಖಾದಿ ಬಟ್ಟೆ ಎಂದರೆ ಕೇವಲ ಬಟ್ಟೆಯಾಗಿರದೆ, ದೇಶಪ್ರೇಮದ ಸಂಕೇತವಾಗಿತ್ತು. ಆದ್ದರಿಂದ ಅದರ ಮೇಲೆ ಅಪಾರ ಗೌರವವಿತ್ತು.

---

# ಪದ್ಯ-1: ಹುತ್ತರಿ ಹಾಡು

I. ಸರಿಯಾದ ಉತ್ತರ:

1-ಎ, 2-ಸಿ, 3-ಬಿ, 4-ಬಿ

II. ಬಿಟ್ಟ ಸ್ಥಳ / ಹೊಂದಿಸಿ:

1-ಡ, 2-ಅ, 3-ಬ, 4-ಕ

III. ಒಂದು ವಾಕ್ಯದಲ್ಲಿ:

1. ಮೋಹನಗಿರಿಯ ಬೆರಗಿನ ರೂಪಿನಿಂದ ನಿಂತಿದ್ದಾಳೆ. 2. ಹೊಸ ಅಕ್ಕಿಯನ್ನು ಮನೆಗೆ ತರುವಾಗ ಆಚರಿಸುವ ಹಬ್ಬ. 3. ಗಿರಿಯ ಬೆರಗಿನ ಸೊಬಗಿನಿಂದ ಇಳಿದು ಬಂದು ಮುಗಿಲಿಗೆ

ಮಿಂಚು ಕಾಣುವಂತೆ ಹೊಳೆಯಾಗಿ ಹರಿಯುತ್ತಿದ್ದಾಳೆ. 4. ಚಂದರ ವರ್ಮನು ಚಂಗಾಳ್ವ ಅರಸರು ಹಾಗೂ ಹಾಲೇರಿಯ ಮನೆತನದವರು.

IV. ಎರಡು-ಮೂರು ವಾಕ್ಯಗಳಲ್ಲಿ:

1. ಭೂರಮೆಯೇ ಇಳಿದು ಬಂದು ನೆಲೆಸಿರುವಳು, ಕಾವೇರಿಯು ಮೈದುಂಬಿ ಹರಿಯುವ ಬೀಡಾಗಿರುವುದು, ಬೊಮ್ಮಗಿರಿಯಿಂದ ಪುಷ್ಪಗಿರಿಯವರಿಗೆ ಹಬ್ಬಿರುವ ದೇಶವಾಗಿದೆ ಎಂದು ಕವಿ ವರ್ಣಿಸಿದ್ದಾರೆ.

2. ಪುರುಷರು ಸೊಂಟಕ್ಕೆ ದಟ್ಟಿ ಕುಪ್ಪಸ ಕಟ್ಟಿ ತಲೆಗೆ ಸುತ್ತಿದ ಪೇಟದೊಂದಿಗೆ ಕಪ್ಪು-ಶ್ವೇತ ವರ್ಣದ ಧಿರಿಸಿನಲ್ಲಿ ಮಿಂಚುವರು. ಮಹಿಳೆಯರು ಸಂಪ್ರದಾಯ ಬದ್ಧ ಸೀರೆಯುಡುತ್ತಾರೆ.

V. 4 ಅಂಕದ ಪ್ರಶ್ನೆಗೆ ಉತ್ತರ:

ಕೊಡಗು ಕಾವೇರಿ ತಾಯಿಯ ತವರು ಮನೆ. ಇಲ್ಲಿನ ವೀರರು ಹುಲಿಯ ಹಾಲನ್ನು ಕುಡಿದವರು. ಹುತ್ತರಿ ಹಬ್ಬವು ಕೊಡಗಿನ ಸುಗ್ಗಿ ಹಬ್ಬವಾಗಿದ್ದು, ಕೊಡಗಿನ ಪ್ರಕೃತಿ ಸೌಂದರ್ಯ, ಕಾವೇರಿ ನದಿಯ ಉಗಮ, ಅಗಸ್ತ್ಯರ ತಪೋಭೂಮಿ, ಜನರ ಶೌರ್ಯ ಹಾಗೂ ಅವರ ವಿಶಿಷ್ಟ ವೇಷಭೂಷಣಗಳ ಬಗ್ಗೆ ಕವಿ ಪಂಜೆ ಮಂಗೇಶರಾವ್ ಅವರು ಈ ಪದ್ಯದಲ್ಲಿ ಸುಂದರವಾಗಿ ವರ್ಣಿಸಿದ್ದಾರೆ.

---

# ಪದ್ಯ-2: ಸ್ವಾತಂತ್ರ್ಯ ಸ್ವರ್ಗ

I. ಸರಿಯಾದ ಉತ್ತರ:

1-ಡಿ, 2-ಬಿ, 3-ಡಿ, 4-ಎ

II. ಬಿಟ್ಟ ಸ್ಥಳ / ಹೊಂದಿಸಿ:

1. ಹೋಳಾಗದೆ, 2. ನಿರ್ಜನದ ಮರುಭೂಮಿ, 3. ವಿಚಾರವಂತರಾಗಬೇಕೆಂಬುದು, 4. ಕವನ

III. ಒಂದು ವಾಕ್ಯದಲ್ಲಿ:

1. ವಿಶ್ವವೆಂಬುದು ಹೋಳಾಗದೆ ಒಂದಾಗಿರುವುದು. 2. ಅವ್ವ / ನವಚೇತನ / ಸುಮನ ಸೌರಭ. 3. ಸುವಿಚಾರವೆಂಬ ಶುದ್ಧ ವಾಹಿನಿ ಹರಿದು ಎಲ್ಲರೂ ವಿಚಾರವಂತರಾಗಬೇಕೆಂದು ಕವಿಯ ಆಶಯವಾಗಿದೆ. 4. ನಿರ್ಜನದ ಮರುಭೂಮಿ.

IV. ಎರಡು-ಮೂರು ವಾಕ್ಯಗಳಲ್ಲಿ:

1. ಮನುಷ್ಯರಲ್ಲಿ ಸಂಕುಚಿತ ಮನೋಭಾವ ದೂರವಾಗಿ, ಎಲ್ಲರೂ ಒಂದಾಗಿ, ಭಯವಿಲ್ಲದ ಸ್ವತಂತ್ರ ಬದುಕು ಕಟ್ಟಿಕೊಳ್ಳಬೇಕು ಎಂಬುದು ಕವಿಯ ಆಶಯ.

2. ಜ್ಞಾನವು ಯಾವುದೇ ನಿರ್ಬಂಧಗಳಿಲ್ಲದೆ, ಭೇದಭಾವವಿಲ್ಲದೆ ಎಲ್ಲರಿಗೂ ಮುಕ್ತವಾಗಿ ಸಿಗುವಂತಾಗಬೇಕು ಎಂದು ಹೇಳಿದ್ದಾರೆ.

V. 4 ಅಂಕದ ಪ್ರಶ್ನೆಗೆ ಉತ್ತರ:

ನಿರ್ಭೀತ ನಿರ್ಮುಕ್ತ ಮನವು ತಾನೆಲ್ಲಿಹುದು;
ಅಭಿಮಾನಧನವೆನಿಪ ಮಸ್ತಕವದು

ಜಗ್ಗದೆಯೆ ಕುಗ್ಗದೆಯೆ ತಗ್ಗದೆಯೆ ಬಗ್ಗದೆಯೆ
ಮೇಲ್ಮೊಗದಿ ನೀಟಾಗಿ ನಿಂದಿರುವುದು;-
ಅಲ್ಲಿ ಆ ಸ್ವಾತಂತ್ರ್ಯ -ಸ್ವರ್ಗದಲಿ, ಓ ತಂದೆ!
ಏಳಲೈ ಬಾಳಲೈ ನಾಡೆಮ್ಮದು!

----------------------------------------

# ಪದ್ಯ-3: ಭಾಗ್ಯದ ಬಳೆಗಾರ

I. ಸರಿಯಾದ ಉತ್ತರ:
1-ಎ, 2-ಬಿ, 3-ಬಿ, 4-ಸಿ
II. ಬಿಟ್ಟ ಸ್ಥಳ / ಹೊಂದಿಸಿ:
1-ಕ, 2-ಡ, 3-ಬ, 4-ಅ
III. ಒಂದು ವಾಕ್ಯದಲ್ಲಿ:
1. ತವರು ಮನೆಯು ಹೆಂಚಿನ ಮನೆಯಾಗಿದ್ದು ಕಂಚಿನ ಕದವನ್ನು ಹೊಂದಿದೆ. 2. ಬಲಕ್ಕೆ ಬೆಳೆದಿರುವ ಬಾಳೆ ಮತ್ತು ಎಡಕ್ಕೆ ಬೆಳೆದಿರುವ ಸೀಬೆಯ ಮಧ್ಯದಲ್ಲಿ ಹೋಗಬೇಕು. 3. ಬಳೆಗಾರನಿಗೆ 4.ಪಗಡೆ

IV. ಎರಡು-ಮೂರು ವಾಕ್ಯಗಳಲ್ಲಿ:
1. ಹಣ್ಣು, ತರಕಾರಿ, ಸೊಪ್ಪು ಮಾರುವವರು. 2. ಅಳಗುಳಿ ಮನೆ, ಚೌಕಬಾರ, ಆನೆ ಕುರಿ.
V. 4 ಅಂಕದ ಪ್ರಶ್ನೆಗೆ ಉತ್ತರ:
ಆಲೆ ಆಡುತ್ತಾವೆ ಗಾಣ ತಿರುಗುತಾವೆ
ನವಿಲು ಸಾರಂಗ ನಲಿತಾವೆ ಬಳೆಗಾರ
ಅದೇ ಕಾಣೋ ನನ್ನ ತವರೂರು
ಮುತ್ತೈದೆ ಎಲೆ ಹೆಣ್ಣೆ ತೋರುಬಾರೆ ತವರೂರ.

----------------------------------------

# ಪದ್ಯ-4: ವಚನಗಳ ಭಾವ ಸಂಗಮ

I. ಸರಿಯಾದ ಉತ್ತರ:
1-ಬಿ, 2-ಸಿ, 3-ಬಿ, 4-ಬಿ
II. ಬಿಟ್ಟ ಸ್ಥಳ / ಹೊಂದಿಸಿ:
1-ಡ, 2-ಬ, 3-ಕ, 4-ಅ
III. ಒಂದು ವಾಕ್ಯದಲ್ಲಿ:
1. ಬಸವಣ್ಣ, ಅಕ್ಕಮಹಾದೇವಿ, ಅಲ್ಲಮಪ್ರಭು. 2. ತಾವು ಹೇಳಿದ ವಚನಗಳು ತಮ್ಮದೇ ಎಂಬ ದೃಢೀಕರಣಕ್ಕಾಗಿ ಮತ್ತು ಆರಾಧ್ಯ ದೈವಗಳ ಮೇಲಿನ ಭಕ್ತಿಗಾಗಿ. 3. ಸಕಲವೂ

ಶಿವನೇ ಎಂದು ನಂಬಿದವರು ಹಾಗೂ ಭಕ್ತಿಗೆ ಹೆಸರಾದವರನ್ನು ಶಿವಶರಣರು ಎನ್ನುತ್ತಾರೆ.
4. ಸುಪ್ರಸಿದ್ಧ ಶರಣರಾದ ಬಸವಣ್ಣನವರ ಹುಟ್ಟೂರು.
IV. ಎರಡು-ಮೂರು ವಾಕ್ಯಗಳಲ್ಲಿ:
1. ಸಜ್ಜನರು ಎಂದರೆ ಒಳ್ಳೆಯವರು. ಒಳ್ಳೆಯವರ ಸಹವಾಸ ಮಾಡುವುದರಿಂದ ನಮ್ಮಲ್ಲಿ ಉತ್ತಮ ವಿಚಾರಗಳು ಹಾಗೂ ನಡವಳಿಕೆಗಳು ಮೂಡುತ್ತವೆ. ಇದು ಜೇನುತುಪ್ಪ ಸವಿದಷ್ಟು ಸಿಹಿಯಾದ ಅನುಭವ ನೀಡುತ್ತದೆ.
2. ವಚನಕಾರರು ಪ್ರಪಂಚದ ಆಗುಹೋಗುಗಳು ಹಾಗೂ ಮನುಷ್ಯನ ನಡತೆಗಳ ಕುರಿತಂತೆ ತಮ್ಮ ವಚನಗಳ ಮೂಲಕ ಜನಸಾಮಾನ್ಯರಿಗೆ ಸರಳವಾಗಿ ಅರ್ಥವಾಗುವಂತೆ ತಿಳಿಸುತ್ತಾರೆ. ಇದರಿಂದ ಜನರ ನಡವಳಿಕೆಯಲ್ಲಿ ಬದಲಾವಣೆ ತರಲು ಸಾಧ್ಯ.
V. 4 ಅಂಕದ ಪ್ರಶ್ನೆಗೆ ಉತ್ತರ:
ವಚನ:
"ಕಳಬೇಡ, ಕೊಲಬೇಡ, ಹುಸಿಯ ನುಡಿಯಲು ಬೇಡ,
ಮುನಿಯಬೇಡ, ಅನ್ಯರಿಗೆ ಅಸಹ್ಯಪಡಬೇಡ,
ತನ್ನ ಬಣ್ಣಿಸಬೇಡ, ಇದಿರ ಹಳಿಯಲು ಬೇಡ,
ಇದೇ ಅಂತರಂಗ ಶುದ್ಧಿ, ಇದೇ ಬಹಿರಂಗ ಶುದ್ಧಿ,
ಇದೇ ನಮ್ಮ ಕೂಡಲಸಂಗಮದೇವನ ಒಲಿಸುವ ಪರಿ."
ಸಂಕ್ಷಿಪ್ತ ವಿವರಣೆ:
ಈ ವಚನದಲ್ಲಿ ಬಸವಣ್ಣನವರು ಉತ್ತಮ ಜೀವನ ನಡೆಸಲು ಬೇಕಾದ ನೈತಿಕ ಮೌಲ್ಯಗಳನ್ನು ತಿಳಿಸುತ್ತಾರೆ. ಕಳ್ಳತನ ಮಾಡಬಾರದು, ಯಾರನ್ನೂ ಕೊಲ್ಲಬಾರದು, ಸುಳ್ಳು ಹೇಳಬಾರದು, ಕೋಪಗೊಳ್ಳಬಾರದು ಹಾಗೂ ಇತರರನ್ನು ದ್ವೇಷಿಸಬಾರದು ಎಂದು ಉಪದೇಶಿಸುತ್ತಾರೆ. ತನ್ನನ್ನು ತಾನೇ ಹೊಗಳಿಕೊಳ್ಳದೆ, ಇತರರನ್ನು ನಿಂದಿಸದೆ ಬದುಕುವುದೇ ಮನಸ್ಸಿನ ಮತ್ತು ನಡವಳಿಕೆಯ ಶುದ್ಧಿ ಎಂದು ಹೇಳುತ್ತಾರೆ. ಇಂತಹ ಒಳ್ಳೆಯ ಗುಣಗಳಿಂದ ಬದುಕಿದರೆ ದೇವರ ಕೃಪೆಗೆ ಪಾತ್ರರಾಗಬಹುದು ಎಂಬ ಸಂದೇಶವನ್ನು ಈ ವಚನ ನೀಡುತ್ತದೆ.

-----------------------------------------

## ಕೊಡುಗೆ:

### ಜಿಪಿಟಿ ಶಿಕ್ಷಕರ ಶೈಕ್ಷಣಿಕ ಸಂಪನ್ಮೂಲಗಳು,ಉತ್ತರ ಕನ್ನಡ

( https://chandugokarna-bit.github.io/gpt-teachers-resources/# )